ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಎರಡೆರಡು ಲಕ್ಷ ರೂ. ಬರತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ಮತ್ತು ಇದನ್ನು ನಾವು ಕಾನೂನಿನ ಚೌಕಟ್ಟಿನಲ್ಲಿ ಆದರೆ ಬೇರೆ ಕಡೆ ಕೊಟ್ಟಂತೆ 50 ಸಾವಿರ ರೂಪಾಯಿ ಕೊಡಬಹುದು. ಪಕ್ಕದ ಮನೆಯವರು ನಿರಪರಾಧಿಗಳು, ಯಾರೋ ಮಾಡಿದ್ದರಿಂದ ತೊಂದರೆಯಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

(ಈ) ವಿಷಯ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿಗಳ ಅವಧಿ ಮೀರಿ ಮುಂದುವರಿಸುತ್ತಿರುವುದರ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಈ ವಿಷಯ ಕಾನೂನಿಗೆ ಮತ್ತು ಸರ್ಕಾರದ ವ್ಯವಸ್ಥೆಗೆ ಸಂಬಂಧ ಪಟ್ಟಂತಹ ವಿಷಯವಾಗಿದ್ದು, ಇದರ ಬಗ್ಗೆ ಎಲ್ಲರೂ ಗಂಭೀರವಾಗಿ ಯೋಚಿಸಬೇಕು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಇದೆ, ಅದು ನಮಗೆಲ್ಲಾ ಗೊತ್ತಿದೆ. ಅದರ ಕುಲಪತಿಗಳಾಗಿ ಡಾ॥ ಕೆ. ಬಲವೀರ ರೆಡ್ಡಿಯವರು 2001 ರಿಂದ ಅಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಆದರೆ ನಮ್ಮ ವ್ಯವಸ್ಥೆ ಹೇಗಿದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿದರೆ ಈ ವ್ಯವಸ್ಥೆಯನ್ನು ಹೇಗೆ ಬೇಕಾದರೂ ಯಾರು ಬೇಕಾದರೂ ನಡೆಸಿಕೊಂಡು ಹೋಗುತ್ತಾರೆನ್ನುವಂತಹ ಅನುಮಾನ ರಾಜ್ಯದ ಜನತೆಗೆ ಆಗಿದೆ. ಸರ್ಕಾರದ ಯಾವುದೇ ನಿಯಮಾವಳಿಗಳ ಪ್ರಕಾರ, ಸರ್ಕಾರದ ಯಾವುದೆ ಕಾಯಿದೆಗಳ ಪ್ರಕಾರ 65 ವರ್ಷ ಆದನಂತರದಲ್ಲಿ ಸರ್ಕಾರದ ಯಾವುದೇ ಕೆಲಸದಲ್ಲಿ ಇರುವ ಹಾಗೆ ಇಲ್ಲ. ಅದಕ್ಕೆ ಯಾವ ಕಾಯಿದೆಗಳು ಅವಕಾಶ ಮಾಡಿಕೊಡುವುದಿಲ್ಲ. ಆದರೆ ಈ ಒಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಕಾಯಿದೆಯಲ್ಲಿ ಈ ವಿಷಯದ ಬಗ್ಗೆ ಸ್ಪಷ್ಟತೆ ಇಲ್ಲವೆನ್ನುವಂತಹ ಒಂದೇ ಒಂದು ವಿಷಯವನ್ನು ಆಧಾರವಾಗಿಟ್ಟುಕೊಂಡು ಅಲ್ಲಿ ಅವರು ಮುಂದುವರೆಯುತ್ತಿದ್ದಾರೆ. ವಿಶ್ವವಿದ್ಯಾಲಯ, ಅದು ಯಾವುದೇ ರಾಜ್ಯದ ದೇಶದ ಕಾಯಿದೆಗಿಂತ ಮೇಲಿರುವಂತಹ ಸಂಸ್ಥೆಯಲ್ಲ ಅದು. ಅದೂ ಕೂಡ ಎಲ್ಲಾ ಕಾಯಿದೆಗಳಿಗೆ ಒಳ ಪಡಬೇಕಾದಂತಹ ಒಂದು ಅಂಗ ಸಂಸ್ಥೆ ಇದೆ; ಬೇರೆ ಬೇರೆ ವಿಶ್ವವಿದ್ಯಾಲಯ ಗಳಲ್ಲಿ ಈ ನಿಯಮ ಪಾಲನೆಯಾಗುತ್ತಿದೆ. ಆದರೆ ಈ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಲವೀರ ರೆಡ್ಡಿಯವರು ಯಾವ ಕಾರಣವನ್ನು ಮುಂದಿಟ್ಟು ಅಲ್ಲಿ ಮುಂದುವರೆಯುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಅವರು ಜೂನ್ 13ಕ್ಕೆ ನಿವೃತ್ತರಾಗಬೇಕಿತ್ತು. ಅವರಿಗೆ ಜೂನ್ 13ಕ್ಕೆ 65 ವರ್ಷವಾಗಿದೆ.

ನಮ್ಮ ಎಜ್ಯುಕೇಷನ್ ಸೆಕ್ರೆಟರಿಯವರು ಜೂನ್ 13ಕ್ಕೆ ನಿವೃತ್ತಿಯಾಗಬೇಕು ಅಥವಾ ಜೂನ್ ಕೊನೆಗೆ ನಿವೃತ್ತಿಯಾಗಬೇಕು ಎಂದು ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಗಳು ಇದೆ. ಆದರೆ ಇದುವರೆಗೂ ಅವರು ಆ ಸ್ಥಾನದಲ್ಲಿ ಮುಂದುವರೆಯುತ್ತಿದ್ದಾರೆ. ಎಂದರೆ ಸರ್ಕಾರದ ಕಾನೂನುಗಳೆಲ್ಲವನ್ನೂ ಮೀರಿ ಹೀಗೆ ತಮ್ಮ ಅಧಿಕಾರವಧಿಗಳಲ್ಲಿ ಅಧಿಕಾರಿಗಳು ಮುಂದುವರೆಯುವುದಕ್ಕೆ ಅವಕಾಶವನ್ನು ಬಿಟ್ಟರೆ ಇನ್ನು ಯಾವ್ಯಾವುದೋ ನೆಪಗಳನ್ನು ಒಡ್ಡಿ, ಕಾನೂನನ್ನು ಉಲ್ಲೇಖಿಸಿ, ಇನ್ಯಾರಾರದ್ದೋ ಉದಾಹರಣೆಗಳನ್ನು ಬಳಸಿ ಎಲ್ಲರೂ ಇದೇ ರೀತಿ ಮುಂದುವರೆಯುತ್ತಾ ಹೋಗಬಹುದು. ನಾವ್ಯಾಕೆ 58 ವರ್ಷಕ್ಕೆ ನಿವೃತ್ತಿ, 60 ವರ್ಷಕ್ಕೆ ನಿವೃತ್ತಿ, 65 ವರ್ಷಕ್ಕೆ ನಿವೃತ್ತಿ ಎಂದೆಲ್ಲಾ ಹೇಳಬೇಕು. ಅವರು ಯಾವುದೋ ನೆಪವನ್ನು ಸಮಜಾಯಿಸಿ ಕೊಟ್ಟು ಕೊಂಡು ಮುಂದುವರೆಯುವುದಾದರೆ ನಾವೆಲ್ಲರೂ ಅದನ್ನು ನೋಡಿಕೊಂಡು ಸುಮ್ಮನಿರಬೇಕು, ರಾಜ್ಯದ ಜನಾಭಿಪ್ರಾಯ ಪತ್ರಿಕೆಗಳಲ್ಲಿ ವರದಿಗಳು ಬಂದಿರುವುದರ ಬಗ್ಗೆ ಈ ಸದನದಲ್ಲಿ ಕೂಡ ಪ್ರಸ್ತಾಪವಾಗಿಲ್ಲ ಎನ್ನುವುದಾದರೆ ನಮ್ಮ ಬಗ್ಗೆ ರಾಜ್ಯದ ಜನ ಹೇಗೆ ಭಾವಿಸಬಹುದು ಎನ್ನುವ ಯೋಚನೆ ಯಾಗುತ್ತದೆ. ಹಾಗಾಗಿ ನಾನು ಡಾ: ಬಲವೀರರೆಡ್ಡಿಯವರ ವೈಯಕ್ತಿಕವಾದಂತಹ ವಿಷಯದ ಬಗ್ಗೆ ಏನೂ ಪ್ರಸ್ತಾಪಿಸುವುದಿಲ್ಲ. ಅವರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಮಾಡಿರುವಂತಹ ಕೆಲಸ ಹಾಗೂ ವಿಶ್ವವಿದ್ಯಾಲಯದಲ್ಲಿ ಆಗಿರುವಂತಹ ಪರಿಣಾಮ, ತಾಂತ್ರಿಕ ಶಿಕ್ಷಣದಲ್ಲಿ ಆಗಿರುವಂತಹ ಪರಿಣಾಮ ಆ ವಿಷಯಗಳಿಗೆ ನಾನು ಹೋಗುವುದೇ ಇಲ್ಲ. ಆದರೆ ಅವರು ಅಲ್ಲಿ ಆ ಸ್ಥಾನದಲ್ಲಿ ಎಲ್ಲಾ ಕಾಯಿದೆಯನ್ನು ಮೀರಿ ಮುಂದುವರೆಯುತ್ತಿರುವುದು ಸರಿಯಲ್ಲ. ಹಾಗಾಗಿ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ರೀತಿಯ ಘಟನೆಗಳು ಬೇರೆ ಬೇರೆ ಸಂದರ್ಭದಲ್ಲಿ ನಡೆದಾಗ ಕ್ರಮ ತೆಗೆದುಕೊಂಡಿದೆ. ಯು.ಜೆ.ಸಿ. ಯವರು ಇರಬಹುದು ಬೇರೆ ಬೇರೆಯವರೆಲ್ಲರೂ ಕ್ರಮ ತೆಗೆದುಕೊಂಡಿರುವಂತಹ ಉದಾಹರಣೆಗಳು ಇದೆ. ಹಾಗಾಗಿ ಸರ್ಕಾರ ಬಲವೀರ ರೆಡ್ಡಿಯವರಿಗೆ ಜೂನ್ 13ಕ್ಕೆ 65 ವರ್ಷಗಳಾಗಿರುವಂತಹ ಹಿನ್ನೆಲೆಯಲ್ಲಿ ಅವರನ್ನು ತಕ್ಷಣ ಆ ಸ್ಥಾನದಿಂದ ನಿವೃತ್ತಿಗೊಳಿಸಬೇಕು. ಎನ್ನುವಂತಹ ಒತ್ತಾಯವನ್ನು ನಾನು ಸರ್ಕಾರದಲ್ಲಿ ಮಾಡುವುದಕ್ಕೆ ಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಅದಕ್ಕೆ ಸಹಿ ಹಾಕಿ ಕೊಟ್ಟಿದ್ದೇನೆ. ಈ ರಾಜ್ಯದ ಆಡಳಿತವನ್ನು ಅರ್ಥ ಮಾಡಿ ಕೊಳ್ಳುವುದಕ್ಕೆ ನಮಗೆ ಕಷ್ಟವಾಗುತ್ತದೆ. ಅವರು ಎಷ್ಟೇ ದೊಡ್ಡವರಿರಲಿ ಸೂಪರ್

ಅನ್ಯುಯೇಷನ್ ರೀಚ್ ಆದಾಗ 65 ವರ್ಷ ಆದಮೇಲೆ ಮತ್ತೆ 2ನೇ ಅವಧಿಗೆ ವೈಸ್ ಚಾನ್ಸಲರ್ ಆಗಿ ಕಂಟಿನ್ಯೂ ಆಗಿ ಮುಂದುವರೆಯುವುದಕ್ಕೆ ಅವಕಾಶ ಇಲ್ಲದಾಗ, ಸರ್ಚ್ ಕಮಿಟಿ ಅಪಾಯಿಂಟ್ ಆಗಿ ಎರಡು ಮೂರು ಹೆಸರುಗಳು ಬಂದಾಗ, ಒಂದು ಕಡೆ ಸರ್ಕಾರ ಸರ್ಚ್ ಕಮಿಟಿ ಅಪಾಯಿಂಟ್ ಮಾಡುವುದು, ಇನ್ನೊಂದು ಕಡೆ ಅವರಿಗೆ ಕಂಟಿನ್ಯೂಯೇಷನ್ ಬೇರೆ ಕಡೆಯಿಂದ ಹೋಗುವುದು. ಅವರೇನು ವೈಸ್ ಚಾನ್ಸಲರ್ ಆಗಿ ಇರುತ್ತಾರಾ? ಇರುವುದಿಲ್ಲವಾ? ಹೇಳುವವರ್ಯಾರು ಕೇಳುವವರ್ಯಾರು? ಇಲ್ಲಿ ಏನಾದರೂ ಒಂದು ಹೇಳಬೇಕಲ್ಲಾ. ಶಾಸನಸಭೆ ನಡೆಯುತ್ತಿದೆ, ಅವರು 65 ವರ್ಷದ ಮೇಲೆ ಇರುವ ಹಾಗೆ ಇಲ್ಲ. ಅವರು 65 ವರ್ಷ ರೀಚ್ ಆಗಿದ್ದಾರೆ. ಡಾ: ಬಲವೀರ ರೆಡ್ಡಿ ಯವರ ಬಗ್ಗೆ ನಮಗೆಲ್ಲಾ ಗೌರವ ಇದೆ ; ಅದು ಬೇರೆ ಮಾತು. ಗೌರವ ಇದೆ ಎಂದಾಕ್ಷಣ ಎಲ್ಲಾ ನಿಯಮಗಳನ್ನು ಮೀರಿ ನೀವು ಯಾರನ್ನಾದರೂ ಕಂಟಿನ್ಯೂ ಮಾಡಬಹುದು ಎಂದು ನಿರ್ಧಾರ ತೆಗೆದುಕೊಳ್ಳುವುದಕ್ಕೆ ತಮಗೆ ಯಾರು ಅಧಿಕಾರ ಕೊಟ್ಟಿದ್ದಾರೆ ಎಂದು ಹೇಳಬೇಕಲ್ಲಾ ಸಭೆಯಲ್ಲಿ. ಮಾನ್ಯ ಅಧ್ಯಕ್ಷರೆ, ಇದು ಎಲ್ಲಾ ಕಡೆ ಹೀಗೆ ಆಗಿದೆ. ಅಲ್ಲಿ ಡಾ: ಬಲವೀರ ರೆಡ್ಡಿಯವರನ್ನು ಮುಂದುವರೆಸುತ್ತಾರೆ. ಓಪನ್ ಯೂನಿವರ್ಸಿಟಿಗೆ ಸುಧಾರಾವ್‌ರವರನ್ನು ಕಂಟಿನ್ಯೂ ಮಾಡುತ್ತಾರೆ. ಇದುವರೆಗೆ ನಮ್ಮ ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿ. ಯ.ಎಂ.ಡಿ ಯವರು ಕೆಲಸ ಮಾಡಿಕೊಂಡು ಹೋಗುತ್ತಿದ್ದರು. ನಾವು ಹತ್ತು ಸಲ ಕೇಳಿದ್ದೇವೆ ಏಕೆ ಮುಂದುವರೆಯತ್ತಾರೆ ಎಂದು. ಒಂದು ಕಾರಣ ಇಲ್ಲ, ಒಂದು ಮಾಹಿತಿ ಇಲ್ಲ. ಸುಮ್ಮನೆ ಒಂದು ಕಡೆ ಸರ್ಚ್ ಕಮಿಟಿ ಎರಡೋ ಮೂರೋ ಹೆಸರುಗಳು ಶಿಫಾರಸ್ಸು ಆಗುವುದು. ಇವತ್ತಲ್ಲ ನಾಳೆ ವೈಸ್ ಚಾನ್ಸಲರ್ ಚೇಂಜ್ ಆಗುತ್ತಾರೆ. ಇರುವ ವೈಸ್ ಚಾನ್ಸಲರ್‌ರವರನ್ನು ಮುಂದುವರೆಸಬೇಕು ಎಂದರೆ ಅವರೇನು ಸೆಕೆಂಡ್ ಡಿವಿಜನ್ ಕ್ಲರ್ಕ್? ಫಸ್ಟ್ ಡಿವಿಜನ್ ಕ್ಲರ್ಕ್? ಯೂನಿವರ್ಸಿಟಿ ವೈಸ್‌ಚಾನ್ಸಲರನ್ನು ನೀವು ಬೇಕಾಬಿಟ್ಟಿಯಾಗಿ ಹೀಗೆ ಮುಂದುವರೆಯುವುದಕ್ಕೆ ಬಿಟ್ಟು ಬಿಟ್ಟರೆ ನಾಳೆ ಗತಿಯೇನು ಸಾರ್? ಅವರ ಅವಧಿ ಮೀರುವ ಮೊದಲೇ ತಾವು ಸರ್ಚ್ ಕಮಿಟಿಯಲ್ಲಿ ಹೆಸರುಗಳನ್ನು ತೆಗೆದುಕೊಳ್ಳಬೇಕು. ಅದರಲ್ಲಿ ಯಾರನ್ನಾದರೂ ಒಬ್ಬರನ್ನು ಶಿಫಾರಸ್ಸು ಮಾಡಿ ಗೌವರ್ನರ್‌ನಿಂದ ಅಪಾಯಿಂಟ್ ಮಾಡಬೇಕಾದಂತಹ ಕೆಲಸವನ್ನು ತಾವು ಮಾಡಿಲ್ಲ. ತಕ್ಷಣ ಈ ಎರಡು ಯೂನಿವರ್ಸಿಟಿಗಳಲ್ಲಿ ಒಂದು ಟೆಕ್ನಿಕಲ್ ಯೂನಿವರ್ಸಿಟಿಯಲ್ಲಿ ಮತ್ತು ಇನ್ನೊಂದು ಓಪನ್ ಯುನಿವರ್ಸಿಟಿಯಲ್ಲಿ ಮತ್ತು ಇನ್ನೊಂದು ಓಪನ್

ಯುನಿವರ್ಸಿಟಿಯಲ್ಲಿ ಎರಡೂ ಕಡೆ ವೈಸ್ ಚಾನ್ಸಲರದ್ದು ಅವಧಿ ಮುಗಿದಿದೆ. ಅಲ್ಲಿ ಬೇಗ ವೈಸ್ ಚಾನ್ಸಲರ್‌ನ್ನು ಅಪಾಯಿಂಟ್ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ಇಲ್ಲವಾ ಎಂಬುದನ್ನು ಹೇಳಬೇಕು.

ಅಧ್ಯಕ್ಷರು: ಈಗ ಮಾನ್ಯ ಸದಸ್ಯರುಗಳು ಹೇಳಿದ್ದಾರೆ, ಎಲ್ಲರೂ ಕೂಡ ಹೇಳುವಂತಹ ಅಗತ್ಯ ಇಲ್ಲ.

ಶ್ರೀ ಪಿ.ಎಸ್. ಪುಟ್ಟೇಗೌಡ: ಸಾರ್, ನಾವು ಸೈನ್ ಹಾಕಿ ಕೊಟ್ಟಿದ್ದೇವೆ ಮುಕ್ತ ವಿಶ್ವವಿದ್ಯಾನಿಲಯದ ವಿಚಾರದಲ್ಲಿ ಮಾತನಾಡುವುದಕ್ಕೆ.

ಅಧ್ಯಕ್ಷರು: ಎಲ್ಲಾ ಕೊಟ್ಟಿದ್ದೀರಿ, ಆದರೆ ಎಲ್ಲರೂ ಹೇಳತಕ್ಕಂಥ ಅಗತ್ಯ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಓಪನ್ ಯುನಿವರ್ಸಿಟಿದ್ದು, ಅವರ ಮೇಲೆ ಸಾಕಷ್ಟು ಕಂಪ್ಲೇಂಟ್ಸ್ ಇದೆ. ಹಗರಣಗಳಿವೆ. ಇಡೀ ಯುನಿವರ್ಸಿಟಿ ಇವತ್ತು ಸ್ತಬ್ಧವಾಗಿದೆ. ಅಲ್ಲಿರುವಂತಹ ಕೆಲಸಗಾರರು ಆರು ತಿಂಗಳಿನಿಂದ ಸ್ಟ್ರೈಕ್ ಮಾಡುತ್ತಿದ್ದಾರೆ. ಆ ಸಮಸ್ಯೆ ಬಗ್ಗೆ ಗಮನ ಕೂಡ ಹರಿಸಲಿಲ್ಲ. ಯಾವ ಕಾರಣದಿಂದ ಅವರನ್ನು ಮುಂದುವರೆಸಿದ್ದಾರೆ ಗೊತ್ತಿಲ್ಲ. ಕಾನೂನಿನಲ್ಲಿ ಇರುವಂತಹ ಕಾಯಿದೆಗಳನ್ನು ದುರುಪಯೋಗ ಮಾಡಿಕೊಂಡು ಅವರಿಗೆ ಇಷ್ಟಬಂದ ಹಾಗೆ ಅವರನ್ನು ಮುಂದುವರೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ಏನು ಕಾರಣ? ಅವರೇನು ಅದ್ಭುತವಾದಂತಹ ಸೇವೆಯನ್ನು ಯೂನಿವರ್ಸಿಟಿಗೆ ಸಲ್ಲಿಸಿದ್ದಾರಾ? ಅಥವಾ ಅವರು ಬೇರೆ ಯಾರೂ ಸಾಧನೆ ಮಾಡದೆ ಇರುವಂಥಾದ್ದನ್ನು ಮಾಡಿಲ್ಲ. ಅದರ ಜೊತೆಗೆ ಸಮಸ್ಯೆಗಳನ್ನು ಸೃಷ್ಟಿ ಮಾಡಿದ್ದಾರೆ. ಇಡೀ ಯೂನಿವರ್ಸಿಟಿ ಸ್ತಬ್ಧವಾಗಿದೆ. ಅದರ ಬಗ್ಗೆ ನಾವು ಪುಟ್ಟೇಗೌಡ ಎಲ್ಲಾ ಸೇರಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕೊಟ್ಟಿದ್ದೇವೆ. ಸುಧಾರಾವ್ ಎನ್ನುವವರನ್ನು ಮುಂದುವರೆಸುವುದರ ಬಗ್ಗೆ ನಮ್ಮದು ತೀವ್ರವಾದಂತಹ ವಿರೋಧ ಇದೆ. ವಾಪಸ್ಸು ತೆಗೆದುಕೊಳ್ಳಬೇಕು, ಯಾವ ಕಾರಣಕ್ಕೋಸ್ಕರ ಅವರನ್ನು ಮುಂದುವರೆಸಿದ್ದಾರೆ ಎಂಬುದು ಗೊತ್ತಿಲ್ಲ.

ಶ್ರೀ ಪಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ ಕರ್ನಾಟಕದಲ್ಲಿ ಹೈಯರ್ ಎಜ್ಯುಕೇಷನ್ ಮಿನಿಸ್ಟರ್ ಇದ್ದಾರಾ ಎಂಬುದು ಗೊತ್ತಾಗುತ್ತಿಲ್ಲ. ಏಕೆಂದರೆ ಎಂಟು ತಿಂಗಳಿನಿಂದ 225 ಜನ ಸ್ಟ್ರೈಕ್ ಮಾಡುತ್ತಾರೆ ಎಂದರೆ, ಕೊನೇಪಕ್ಷ ಅಲ್ಲಿ ಹೋಗಿ ನೋಡುವಂತಹ ಕೆಲಸ ಮಾಡಿಲ್ಲ. ನಾವು ಇಲ್ಲಿ ಹತ್ತಾರು ಸಲ ಪ್ರಸ್ತಾಪ ಮಾಡಿದೆವು. ಕನಿಷ್ಟ ಪಕ್ಷ ಅಲ್ಲಿ ಹೋಗಿ ಏನಾಗಿದೆ ಎಂದು ಸಹನೆ ಕೂಡ ಈ ಹೈಯರ್ ಎಜ್ಯುಕೇಷನ್

ಮಿನಿಸ್ಟರ್‌ಗೆ ಇಲ್ಲವೆಂದರೆ ಏಕೆ? ಇದು ಏನು ನಡೆಯುತ್ತಿದೆ? ಇದು ಪತ್ರಿಕೆಯಲ್ಲಿ ಕೂಡ ಬಂದಿದೆ. ಯಾರು ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮಾಡಿದವರು? ಯಾರ ಕೈವಾಡ? ಇದೇನು ಸರ್ಕಾರ ಮಾಡಿದೆಯೋ ಅಥವಾ ಅವರೇ ಮುಂದುವರೆಯುತ್ತಿದ್ದಾರಾ ಎಂದು ಬಂದಿದೆ. ಇಲ್ಲಿ ಈಗ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು, ಶ್ರೀ ಬಿ.ವಿ. ಶ್ರೀರಾಮರೆಡ್ಡಿಯವರು ಹೇಳಿದರು. ಈಗ ಯಾವುದೇ ವಿಶ್ವವಿದ್ಯಾಲಯಕ್ಕೂ ಕಡಿವಾಣವೇ ಇಲ್ಲ. ರಾಜೀವ್‌ಗಾಂಧಿ ಯೂನಿವರ್ಸಿಟಿಗೆ, ಮುಕ್ತ ವಿಶ್ವವಿದ್ಯಾಲಯಕ್ಕೆ...

ಅಧ್ಯಕ್ಷರು: ನೀವೇ ನಿಮ್ಮ ಮಂತ್ರಿಗಳನ್ನು censure ಮಾಡುತ್ತಿದ್ದೀರಲ್ಲಾ..

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಇಲ್ಲಿ ಇರುವಂತಹ ವಿಚಾರವನ್ನು ಹೇಳಬೇಕಲ್ಲಾ, ಅಲ್ಲಿ ಬಡಿದುಕೊಳ್ಳುತ್ತಿದ್ದಾರೆ, ಕನಿಷ್ಟ ಏಕೆ ಬಡಿದು ಕೊಳ್ಳುತ್ತಿದ್ದೀಯಾ, ಎಂದು ಕೇಳುವಂಥಾದ್ದು, ಆ ತಾಳ್ಮೆ ಇಲ್ಲದೇ ಇದ್ದರೆ ನಾವು ಏಕೆ ಇಲ್ಲಿಗೆ ಶಾಸಕರು ಆಗಿ ಬರಬೇಕು? ಶಾಸಕರು ಎಂದು ಹೇಳಿಕೊಳ್ಳುವುದಕ್ಕೆ ಅವಮಾನವಾಗುತ್ತದೆ. ಅಲ್ಲಿ ಕನಿಷ್ಟ ಏನು ಆಗಿದೆಯೆಂಬುದನ್ನು ಇಲ್ಲಿ ನಾವು ಹೇಳಬಾರದೆ?

ಅಧ್ಯಕ್ಷರು: ಆಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು 38 ಜನ ಶಾಸಕರು ಸಹಿ ಮಾಡಿ, ಗೌವರ್ನರ್‌ಗೆ ಪತ್ರವನ್ನು ಕೊಟ್ಟಿದ್ದೇವೆ. ಅಲ್ಲಿ ಅವರನ್ನು ಮುಂದುವರೆಸುವಂಥಾದ್ದು ಸರಿಯಿಲ್ಲವೆಂದು ಹೇಳಿ ಕೊಟ್ಟಿದ್ದೇವೆ.

ಅಧ್ಯಕ್ಷರು: ಆಯಿತು, ಸರ್ಕಾರದವರು ಪರವಾಗಿ ಉತ್ತರವನ್ನು ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ತಾವು ಆಲೋಚನೆ ಮಾಡಿ. ನಾವು 38 ಜನ ಶಾಸಕರು ಸಹಿ ಮಾಡಿ ಗವರ್ನರ್‌ಗೆ ಕೊಟ್ಟಿದ್ದೇವೆ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಮತ್ತೆ ಅದನ್ನು ವರ್ಣನೆ ಮಾಡುವ ಅಗತ್ಯ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಲ್ಲಿ ಅವರನ್ನು ಮುಂದುವರೆಸುವಂಥಾದ್ದನ್ನು ಯಾವ ಕಾರಣದಿಂದ ಮಾಡಿದ್ದಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಅಲ್ಲಿ ಸಂಬಳವನ್ನು ಸರ್ಕಾರ ಏನು ಕೊಡಬೇಕಾಗಿಲ್ಲ. ಅಲ್ಲಿ ನೌಕರರು ದುಡಿದು ಸುಮಾರು 10 ವರ್ಷಗಳಲ್ಲಿ ಸುಮಾರು 60 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, 4 ಕೋಟಿ ರೂಪಾಯಿಗಳು ಬರುತ್ತದೆ. ಅಲ್ಲಿ ಇರುವ ದುಡ್ಡನ್ನು ನಿಮ್ಮ ಪ್ರತಿನಿಧಿಗಳಾಗಿ

ಕಳುಹಿಸಿರುವಂಥ ಬಿಒಎಂಗಳು ಕೊಡಬೇಕೆಂದು ಪೇ ಗ್ರೇಡ್ ಸ್ಕೇಲ್ ಮಾಡಿ, ಎಂದು ಹೇಳಿದರೂ ಕೂಡ, ಅಲ್ಲಿ ಅವರು ಕೊಡುವುದಕ್ಕೆ ಎಲ್ಲರನ್ನೂ ಮೃಗಗಳನ್ನು ನೋಡುವ ರೀತಿಯಲ್ಲಿ ನೋಡಿ, ಅಲ್ಲಿ ಯೂನಿವರ್ಸಿಟಿಯಲ್ಲಿ ಕುಳಿತಿದ್ದಾರೆಂದರೆ, ಈ ಬಗ್ಗೆ ಸರ್ಕಾರ ಸುಮ್ಮನೆ ಇದ್ದರೆ, ಸರ್ಕಾರ ಇದೆಯೋ, ಇಲ್ಲವೋ ಎಂಬ ಅನುಮಾನ ನಮಗೆ ಆಗುತ್ತದೆ. ಆದುದರಿಂದ ಇದರ ಬಗ್ಗೆ ಶೀಘ್ರವಾಗಿ ಎಜ್ಯುಕೇಷನ್ ಮಿನಿಸ್ಟರ್, ಅಥವಾ ಮುಖ್ಯಮಂತ್ರಿಯವರೊ, ಅಥವಾ ಉಪ ಮುಖ್ಯಮಂತ್ರಿಯವರೊ, ದಯಮಾಡಿ ಆ ಕಡೆಗೆ ಗಮನವನ್ನು ಹರಿಸಬೇಕು.

ಅಧ್ಯಕ್ಷರು: ತಾವು ಸರ್ಕಾರ ಇಲ್ಲವೆಂಬ ತೀರ್ಮಾನಕ್ಕೆ ಬಂದಿದ್ದಿರಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರ ಅಭಿಪ್ರಾಯವನ್ನು ಹೇಳಿದ್ದಾರೆ.

ಅಧ್ಯಕ್ಷರು: ಏಕೆಂದರೆ ಮಾತನಾಡುವಾಗ, ಸ್ವಲ್ಪ...

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಎಲ್ಲಾ ಶಾಸಕರುಗಳು ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೇಯದಾಗಿ ಬನವೀರರೆಡ್ಡಿಯವರಿಗೆ 65 ವರ್ಷಗಳು ಆಗಿರುವುದರಿಂದ, ಅವರು ಕಾನೂನಿನ ರೀತಿಯಲ್ಲಿ ಮುಂದುವರೆಯುವುದಕ್ಕೆ ಅವಕಾಶ ಇಲ್ಲ. ಆದುದರಿಂದ ಏಕೆ ಕ್ರಮ ತೆಗೆದುಕೊಂಡಿಲ್ಲವೆಂದು ಕೇಳಿದ್ದಾರೆ. ಅದೇ ರೀತಿಯಲ್ಲಿ ಶ್ರೀಮತಿ ಸುಧಾರಾವ್ ರವರ ಬಗ್ಗೆ ವಿರುದ್ಧವಾಗಿ ಅನೇಕ ಆಪಾದನೆಗಳು ಇದೆ, ಮತ್ತೆ ಶಾಸಕರುಗಳೂ ಕೂಡ ಬರೆದಿದ್ದಾರೆ ; ಮತ್ತೆ ಅವರನ್ನು ಮತ್ತೊಂದು ಅವಧಿಗೆ ಮುಂದುವರೆಸಿರುವಂಥಾದ್ದು ಸಾಧುವಾದುದ್ದೇ ಎಂದು ; ಈ ಎರಡೂ ವಿಷಯಗಳ ಬಗ್ಗೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಮೇಲ್ಮನೆಯಲ್ಲಿ ಸಭಾನಾಯಕರಾಗಿ, ಇರುವುದರಿಂದ ಈಗ ಅಲ್ಲಿ ಅವರು ಇದ್ದಾರೆ. ನಾನು ಮಧ್ಯಾಹ್ನ ಅವರೊಡನೆ ಭೋಜನ ವಿರಾಮದಲ್ಲಿ ಮಾತನಾಡುತ್ತೇನೆ. ಈಗಾಗಲೇ ತಾವು ಏನು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದೀರಿ, ಅದು ನಿಜ. ಯಾವುದು ಕಾನೂನಿನಲ್ಲಿ ಅವಕಾಶ ಇಲ್ಲವೋ ಅವರನ್ನು ಮುಂದುವರೆಸಬಾರದು. ಅದು ಕಾನೂನಿನಲ್ಲಿ ಅವಕಾಶ ಇಲ್ಲವೆಂದಾಗ, ತಾತ್ಕಾಲಿಕವಾಗಿ ಏರ್ಪಾಡು ಮಾಡುವಂಥಾದ್ದು ಇದ್ದರೂ ಕೂಡ, ಬೇರೆ ರೀತಿಯಲ್ಲಿ ಯೋಚನೆಯನ್ನು ಮಾಡಬೇಕೇ ವಿನಃ ಅದನ್ನು ಮುಂದುವರೆಸುವಂಥಾದ್ದು ಕೆಟ್ಟ ಸಂಪ್ರದಾಯವಾಗುತ್ತದೆ ; ಮತ್ತೆ ಕಾನೂನು ಬಾಹಿರವಾಗುತ್ತದೆ. ಅದೇ ರೀತಿಯಲ್ಲಿ ಶ್ರೀಮತಿ ಸುಧಾರಾವ್‌ರವರ ವಿಚಾರದಲ್ಲೂ ಕೂಡ, ಯಾವ ಹಿನ್ನೆಲೆಯಲ್ಲಿ ಅವರು ಮುಂದುವರೆದಿದ್ದಾರೆಂಬುದು ಗೊತ್ತಿಲ್ಲ. ಅದರ ಬಗ್ಗೆ ಬಹಳ ಆಪಾದನೆಗಳು ನಮಗೂ ಮತ್ತು ಸರ್ಕಾರದ ಗಮನಕ್ಕೂ, ಕೂಡ ಬಂದಿದೆ. ನಾನು ಉನ್ನತ ಶಿಕ್ಷಣ ಸಚಿವರೊಡನೆ

ಮಾತನಾಡಿ, ಈ ದಿವಸವೇ ಸಾಧ್ಯವಾದರೆ, ಇಲ್ಲವೇ ನಾಳೆಯಾದರೂ ಕೂಡ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು: ನಾಳೆ ಉಳಿದಿರುವಂಥಾದ್ದಕ್ಕೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶವನ್ನು ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಸಿಎಂಜಿವೈ ಬಗ್ಗೆ ಕೊಟ್ಟಿದ್ದೇವೆ. ಈಗ ಸದನದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಯವರು ಇದ್ದಾರೆ. ಒಂದೇ ಒಂದು ನಿಮಿಷ ಅವಕಾಶವನ್ನು ಕೊಡಿ, ನಾವು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಪತ್ರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೆ, ತಾವು ದಯಮಾಡಿ ಒಂದು ನಿಮಿಷ ಕೇಳಿ. ಅನೇಕ ಜನ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಲು ಸೂಚನೆಗಳನ್ನು ಕೊಟ್ಟಿದ್ದಾರೆ. ಈಗಾಗಲೇ ಒಂದೂವರೆ ಗಂಟೆಯಾಗಿದೆ, ಅದಕ್ಕೋಸ್ಕರ ಈಗ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಶಾಸಕರ ಗೌರವಾರ್ಥ ಒಂದು ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ. ಆದುದರಿಂದ ದಯಮಾಡಿ ಎಲ್ಲರೂ ಭೋಜನಕ್ಕೆ ಬರಬೇಕೆಂದು ಹೇಳುತ್ತೇನೆ. ಈಗ ಸದನವನ್ನು ಮಧ್ಯಾಹ್ನ 2.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವೂ ಭೋಜನ ವಿರಾಮಕ್ಕೆ ಮಧ್ಯಾಹ್ನ 1 ಗಂಟೆ 33 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

ಸದನವು ಮಧ್ಯಾಹ್ನ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ

(ಉ) ವಿಷಯ: ಸದನದಲ್ಲಿ ಸಚಿವರುಗಳ ಗೈರು ಹಾಜರಿ ಬಗ್ಗೆ

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾರಿದ್ದಾರೆಂದು ಇಷ್ಟು ಬೇಗ ಬಂದಿದ್ದೀರಿ? ಪಾಪ, ಮಂತ್ರಿಗಳೆಲ್ಲಾ ಭೋಜನದ ನಂತರ ವಿರಾಮದಲ್ಲಿದ್ದಾರೆ. ಅಧಿಕಾರಿಗಳೂ ಇಲ್ಲ, ಮಂತ್ರಿಗಳೂ ಇಲ್ಲ. ಯಾರಿಗೋಸ್ಕರ ಈಗ ಸದನ ನಡೆಸುವುದು?

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ವಿರೋಧ ಪಕ್ಷದಲ್ಲಿದ್ದಾಗ ನೀವು ಏನು ಮಾಡುತ್ತಿದ್ದಿರಿ? ಮಾನ್ಯ ಹೆಗಡೆಯವರೆ, Regular